ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

**ಸುತ್ತೋಲೆ**

ಸಂಖ್ಯೆ: ನಾ.ನೃ.ಸಂ.ವಿ.ಪ್ರ. 2018-19 ದಿನಾಂಕ:30/08/2018

ವಿಷಯ : 2018-19 ನೇ ಸಾಲಿನಲ್ಲಿ ರಾಜ್ಯ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ಶಿಕ್ಷಕರಿಗೆ ವಿಜ್ಞಾನ ವಸ್ತು ಪ್ರದರ್ಶನ ಆಯೋಜಿಸುವ ಬಗ್ಗೆ.

ಉಲ್ಲೇಖ:-1) **NCERT Guidelines 44th JNNSMEE- Children 2018-19 dt:6.6.18**

2) ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:27.06.2018

3) ಮಾನ್ಯ ಶಿಕ್ಷಣ ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರ ಟಿಪ್ಪಣಿ. ದಿನಾಂಕ: 24.08.2018

*******

ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷದಂತೆ, 2018-19 ನೇ ಸಾಲಿನಲ್ಲಿಯೂ ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ವಿಜ್ಞಾನ ವಸ್ತುಪ್ರದರ್ಶನವನ್ನು ಎನ್.ಸಿ.ಇ.ಆರ್.ಟಿ. ಮತ್ತು ವಿ.ಐ.ಟಿ.ಎಂ ರವರ ಸಹಯೋಗದಲ್ಲಿ ದಿನಾಂಕ ರಾಜ್ಯಮಟ್ಟದ ವಸ್ತು ಪ್ರದರ್ಶನವನ್ನು 30.10.2018ರೊಳಗೆ ಆಯೋಜಿಸಲು ತೀರ್ಮಾನಿಸಲಾಗಿದೆ.

2018-19ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಾಗೂ ವಿಜ್ಞಾನ ಶಿಕ್ಷಕರಿಗೆ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನವನ್ನು ಗದಗ ಡಯಟ್ ವತಿಯಿಂದ ಗದಗ ಜಿಲ್ಲೆಯಲ್ಲಿ ಮೂರು ದಿನಗಳ ಅವಧಿಗೆ ಆಯೋಜಿಸಲು ತೀರ್ಮಾನಿಸಲಾಗಿದೆ, ಈ ಸ್ಪರ್ಧಾ ಕಾರ್ಯಕ್ರಮವನ್ನು ಸುಸೂತ್ರವಾಗಿ ನಡೆಸಲು ಬೇಕಾದ ವ್ಯವಸ್ಥೆ ಬಗ್ಗೆ ಕೂಡಲೇ ಸಿದ್ಧತೆ ಮಾಡಿಕೊಳ್ಳುವುದು. ಹಾಗೂ ಕಾರ್ಯಕ್ರಮದ ಆಯೋಜನೆ ಬಗ್ಗೆ ಪ್ರಗತಿ ವರದಿಯನ್ನು ಒಂದು ವಾರದೊಳಗೆ ಈ ಕಛೇರಿಗೆ ಸಲ್ಲಿಸುವುದು.

***ವಸ್ತು ಪ್ರದರ್ಶನಕ್ಕೆ ನಿಗದಿಪಡಿಸಿದ ಮುಖ್ಯ ವಿಷಯ ಹಾಗೂ ಉಪವಿಷಯಗಳು ಈ ಕೆಳಕಂಡಂತಿವೆ***

| ಮುಖ್ಯ ವಿಷಯ: "ಜೀವನದ ಸವಾಲುಗಳಿಗೆ ವೈಜ್ಞಾನಿಕ ಪರಿಹಾರ "<br>Main Theme: "Scientific Solutions for Challenges in Life" | |
|---|---|
| ಉಪವಿಷಯಗಳು | |
| 1. ವ್ಯವಸಾಯ ಮತ್ತು ಸಾವಯವ ಕೃಷಿ | 1. Agriculture & Organic Farming |
| 2. ಆರೋಗ್ಯ ಮತ್ತು ನೈರ್ಮಲ್ಯ | 2. Health and cleanliness |
| 3. ಸಂಪನ್ಮೂಲ ನಿರ್ವಹಣೆ | 3. Resource Management |
| 4 ತ್ಯಾಜ್ಯ ನಿರ್ವಹಣೆ | 4. Waste Management |
| 5. ಸಾರಿಗೆ ಮತ್ತು ಸಂಪರ್ಕ | 5. Transport&Communication |
| 6.ಗಣಿತಶಾಸ್ತ್ರದಿಂದ ವಿನ್ಯಾಸಗೊಳಿಸುವಿಕೆ | 6. Mathematical Modeling |

***ವಸ್ತುಪ್ರದರ್ಶನ ಆಯೋಜನೆಗೆ ಈ ಕೆಳಕಂಡ ಕ್ರಮಗಳನ್ನು ವಹಿಸುವುದು.***

- ವಸ್ತು ಪ್ರದರ್ಶನದ ಆಯೋಜನೆ 30.10.2018 ರೊಳಗೆ ಪೂರ್ಣಗೊಳ್ಳಬೇಕು ಹಾಗೂ ಕಾರ್ಯಕ್ರಮದ ಅವಧಿ - 3 ದಿನಗಳು
- ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಸಮಿತಿಗಳನ್ನು ರಚಿಸಿ, ಪೂರ್ವಭಾವಿ ಸಭೆ ನಡೆಸುವುದು.
- ಕಾರ್ಯಕ್ರಮದ ಆಯೋಜನೆಗೆ ಈ ನಿರ್ದೇಶನಾಲಯದಿಂದ ಬಿಡುಗಡೆಯಾಗಲಿರುವ ಮೊತ್ತ ರೂ: 5.53 ಲಕ್ಷಗಳು(ಐದು ಲಕ್ಷದ ಐವತ್ತು ಮೂರು ಸಾವಿರ ಎಂಟು ನೂರು ರೂಪಾಯಿಗಳು ಮಾತ್ರ) ಈ ಮಿತಿಯಲ್ಲಿಯೇ ಕಾರ್ಯಕ್ರಮವನ್ನು ಆಯೋಜಿಸುವುದು.

*ಭಾಗವಹಿಸುವರ ಅಂದಾಜು ಸಂಖ್ಯೆ ಈ ಕೆಳಕಂಡಂತಿದೆ.*

1) ಪ್ರತಿ ಜಿಲ್ಲೆಯಿಂದ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ----- 12X34=408

2) ಮಾರ್ಗದರ್ಶಿ ಶಿಕ್ಷಕರು ----- 6 X 34=204

3) ಶಿಕ್ಷಕರ ವಿಭಾಗದಿಂದ ------ 1 X 34=34

ಒಟ್ಟು ----- 646

*ಸ್ಪರ್ಧೆಗಳು ವೈಯಕ್ತಿಕ, ಗುಂಪು ಹಾಗೂ ಶಿಕ್ಷಕರ ಹೀಗೆ ಮೂರು ವಿಭಾಗಗಳಲ್ಲಿ ಆಯೋಜನೆಯಾಗಲಿವೆ*

**ವೈಯಕ್ತಿಕ ವಿಭಾಗ**: ಒಬ್ಬ ವಿದ್ಯಾರ್ಥಿ/ನಿ ಮತ್ತು ವಿದ್ಯಾರ್ಥಿಯ ಓರ್ವ ಮಾರ್ಗದರ್ಶಿ ಶಿಕ್ಷಕ/ಕಿ
**ಗುಂಪು ವಿಭಾಗ**: ಇಬ್ಬರು ವಿದ್ಯಾರ್ಥಿಗಳು ಹಾಗೂ ಓರ್ವ ಮಾರ್ಗದರ್ಶಿ ಶಿಕ್ಷಕ/ಕಿ
**ಶಿಕ್ಷಕರ ವಿಭಾಗ**: ಪ್ರತಿ ಜಿಲ್ಲೆಯಿಂದ ಓರ್ವ ಪ್ರೌಢ ಶಾಲಾ ವಿಜ್ಞಾನ ಶಿಕ್ಷಕ/ಕಿ

- ಕಾರ್ಯಕ್ರಮದ ಖರ್ಚು ವೆಚ್ಚ ಹಾಗೂ ಆಯೋಜನೆಯಲ್ಲಿ ಪಾರದರ್ಶಕತೆ ಕಾಪಾಡುವ ನಿಟ್ಟಿನಲ್ಲಿ K.T.T.P ಕಾಯಿದೆ ನಿಯಮಗಳಂತೆ ಕ್ರಮವಹಿಸುವುದು.
- ಭಾಗವಹಿಸಲಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕಾರ್ಯಕ್ರಮ ನಡೆಯುವ ಹಿಂದಿನ ದಿನ ರಾತ್ರಿ ಮತ್ತು ಕಾರ್ಯಕ್ರಮದ ಮೂರು ದಿನಗಳಿಗೆ ಊಟದ ಮತ್ತು ತಂಗುವ ವ್ಯವಸ್ಥೆ ಗೆ ಕ್ರಮ ವಹಿಸುವುದು.
- ಮಾದರಿಗಳನ್ನು ಪ್ರದರ್ಶಿಸಲು ಅಗತ್ಯ ಟೇಬಲ್, ಕೊಠಡಿ, ವಿದ್ಯುತ್, ನೀರು, Dark Room ಇತ್ಯಾದಿ ವ್ಯವಸ್ಥೆಗೆ ಕ್ರಮ ವಹಿಸುವುದು.
- ರಾಜ್ಯ ವಲಯದಿಂದ ಬಿಡುಗಡೆಯಾಗುವ ಅನುದಾನಕ್ಕೆ ನಿಯಮಾನುಸಾರ ಲೆಕ್ಕ ಪತ್ರಗಳನ್ನು ನಿರ್ವಹಿಸುವುದು.

*ತೀರ್ಪುಗಾರರ ಆಯ್ಕೆ ಮತ್ತು ಮುಂದಿನ ಹಂತಕ್ಕೆ ಸ್ಪರ್ಧಿಗಳ ಆಯ್ಕೆ ಪ್ರಕ್ರಿಯೆ*

ಪ್ರತಿ ಉಪವಿಷಯದಲ್ಲಿ (ಸಬ್ ಥೀಮ್) ಸಾಕಷ್ಟು ಪರಿಣಿತಿಯನ್ನು ಹೊಂದಿರುವ ಆರು ತೀರ್ಪುಗಾರರನ್ನು ಆಯ್ಕೆ ಮಾಡಿ ವಿದ್ಯಾರ್ಥಿಗಳ ಮಾದರಿಗಳನ್ನು ಮೌಲ್ಯ ಮಾಪನ ಮಾಡಿಸಿ, ನಿಗದಿತ ಸಂಖ್ಯೆಯ ವಿದ್ಯಾರ್ಥಿಗಳನ್ನು ದಕ್ಷಿಣ ವಲಯ ಮಟ್ಟಕ್ಕೆ ಈ ಕೆಳಕಂಡಂತೆ ಆಯ್ಕೆ ಮಾಡುವುದು.

- ವಿದ್ಯಾರ್ಥಿಗಳ ವೈಯಕ್ತಿಕ ವಿಭಾಗದಲ್ಲಿ : 20ತಂಡಗಳು
- ವಿದ್ಯಾರ್ಥಿಗಳ ಗುಂಪು ವಿಭಾಗದಲ್ಲಿ : 15 ತಂಡಗಳು
- ಶಿಕ್ಷಕರ ವಿಭಾಗದಲ್ಲಿ : 15 ಸ್ಪರ್ಧಿಗಳು

ವಸ್ತು ಪ್ರದರ್ಶನಕ್ಕೆ ಮುಂಚಿತವಾಗಿಯೇ ತೀರ್ಪುಗಾರರ ಸಭೆಯನ್ನು ನಡೆಸಿ, ಅಂಕಗಳ ಹಂಚಿಕೆ, ಆಯ್ಕೆ ವಿಧಾನ, ಆಯ್ಕೆ ಮಾನದಂಡಗಳು ಇತ್ಯಾದಿ ವಿಷಯಗಳನ್ನು ಚರ್ಚಿಸುವುದು. ಎನ್.ಸಿ.ಇ.ಆರ್ .ಟಿ. ನವದೆಹಲಿ ರವರ ಗೈಡ್‌ಲೈನ್ಸ್‌ರಲ್ಲಿರುವಂತೆ ಕ್ರಮವಹಿಸುವುದು.

ತೀರ್ಪುಗಾರಿಕೆ ಪಾರದರ್ಶಕವಾಗಿದ್ದು, ಅರ್ಹ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮುಂದಿನ ದಕ್ಷಿಣ ವಲಯ ಮಟ್ಟಕ್ಕೆ ಆಯ್ಕೆ ಮಾಡಬೇಕು . ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುವುದು. ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವ ಜಿಲ್ಲೆಯ ಶಾಲೆಗಳ ವಿದ್ಯಾರ್ಥಿಗಳಿಗೆ ಮುಂಚಿತವಾಗಿಯೇ ಸಮಯ ನಿಗದಿಪಡಿಸುವುದು. ವಸ್ತು ಪ್ರದರ್ಶನ ಅವಧಿ 3 ದಿನಗಳು ಇರುವುದರಿಂದ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ವೀಕ್ಷಣೆಗೆ ಅವಕಾಶ ನೀಡುವುದು. ಸಾರ್ವಜನಿಕರಿಗೆ ಬೇರೆ ಸಮಯ ನಿಗದಿಪಡಿಸುವುದು

*ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನಕ್ಕೆ ನಿಗದಿಪಡಿಸಿರುವ ಅನುದಾನ ಬಳಕೆಗೆ ಮಾರ್ಗಸೂಚಿಗಳು*

| ಕ್ರ.ಸಂ | ವಿವರ | ಮೊತ್ತ | ಒಟ್ಟು ಮೊತ್ತ |
|---|---|---|---|
| 1 | ಬಹುಮಾನ ವಿದ್ಯಾರ್ಥಿಗಳಿಗೆ | | |
| | ಪ್ರಥಮ | ರೂ.3000X6=18000 | |
| | ದ್ವಿತೀಯ | ರೂ.2000X6=12000 | |
| | ತೃತೀಯ | ರೂ.1500X6=9000 | ರೂ.39000 |
| | ಒಟ್ಟು | ರೂ 39.000 | |

| | | | |
|---|---|---|---|
| 2 | ಬಹುಮಾನ ಶಿಕ್ಷಕರಿಗೆ | | |
| | ಪ್ರಥಮ | ರೂ.1000X1=1000 | |
| | ದ್ವಿತೀಯ | ರೂ.750X1=750 | |
| | ತೃತೀಯ | ರೂ.500X1=500 | |
| | ಒಟ್ಟು | ರೂ 2250=00 | ರೂ 2250=00 |
| | | | |
| 3 | ತೀರ್ಪುಗಾರರ ಸಂಭಾವನೆ | ರೂ.1500X6=9000 | |
| | ವಿದ್ಯಾರ್ಥಿಗಳ ವಿಭಾಗ | ರೂ.1500X2=3000 | |
| | ಶಿಕ್ಷಕರ ವಿಭಾಗ | | |
| | ಒಟ್ಟು | ರೂ 12000=00 | ರೂ 12000=00 |
| | | | |
| 4 | ಉಪನ್ಯಾಸ ನೀಡುವರಿಗೆ ಸಂಭಾವನೆ | ರೂ.1000X1=1000 | ರೂ 1000=00 |
| 5 | ಭಾಗವಹಿಸುವಶಿಕ್ಷಕ ಸ್ಪರ್ಧಿಗಳು ವಿದ್ಯಾರ್ಥಿಗಳು ಹಾಗೂ ಅವರನ್ನು ಕರೆತರುವ ಒಬ್ಬರು ಶಿಕ್ಷಕರಿಗೆ ಪ್ರಯಾಣ ಭತ್ಯೆ | .ಅಂದಾಜು ರೂ 2,49,550 | ರೂ 2,49,550 |
| 6 | ಆಯೋಜನಾ ವೆಚ್ಚ | ಅಂದಾಜು ರೂ 2,50,000=00 | ರೂ 2,50,000=00 |
| | ಒಟ್ಟು ಮೊತ್ತ | | ರೂ 5,53,800=00 |

*ಐದು ಲಕ್ಷದ ಐವತ್ತು ಮೂರು ಸಾವಿರದ ಎಂಟು ನೂರು ಮಾತ್ರ*

***ವಿಶೇಷ ಸೂಚನೆ:***

1. ವಿದ್ಯಾರ್ಥಿಗಳ ವಿಭಾಗದಲ್ಲಿ ಒಬ್ಬ ವಿದ್ಯಾರ್ಥಿ/ನಿ ಮಾದರಿಯನ್ನು ಪ್ರದರ್ಶಿಸಿ ಬಹುಮಾನ ಪಡೆದಿದ್ದಲ್ಲಿ , ನಿಗದಿ ಪಡಿಸಿರುವ ಬಹುಮಾನದ ಅರ್ಧದಷ್ಟು ಮೊತ್ತವನ್ನು ಮಾತ್ರ ನೀಡುವುದು. ಉದಾ: ಪ್ರಥಮ ಸ್ಥಾನ ಪಡೆದಿದ್ದಲ್ಲಿ ರೂ 1500-00 ಮಾತ್ರ ನೀಡತಕ್ಕದ್ದು, ಉಳಿಕೆ ಮೊತ್ತವನ್ನು ಕ್ರ.ಸಂ 5 ರಲ್ಲಿನ ವೆಚ್ಚ ಭರಿಸಲು ಬಳಸಬಹುದಾಗಿದೆ. ಇದೇ ನಿಯಮ ಸಮಾಧಾನಕರ ಬಹುಮಾನಕ್ಕೂ ಅನ್ವಯಿಸುತ್ತದೆ.
2. ರಾಜ್ಯ ವಲಯದ ಅನುದಾನದ ಖರ್ಚಿನ ಬಾಬ್ತಿನ ಕ್ರ.ಸಂ.1.2,3 ಮತ್ತು 4 ರ ಬಾಬ್ತಿನಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಲು ಅವಕಾಶವಿಲ್ಲ, ಇದರಲ್ಲಿ ಉಳಿಕೆಯಾದ ಮೊತ್ತವನ್ನು ಕ್ರ.ಸಂ.5 ಅಥವಾ 6 ರಲ್ಲಿನ ವೆಚ್ಚ ಭರಿಸಲು ಬಳಸಬಹುದಾಗಿದೆ.
3. ಕ್ರ.ಸಂ.5 ಮತ್ತು 6 ರ ಮೊತ್ತವನ್ನು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

*ನಿರ್ದೇಶಕರು (ಪ್ರೌಢ ಶಿಕ್ಷಣ)*

ಗೆ,
ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ
ಗದಗ ಜಿಲ್ಲೆ
ಗದಗ

ಪ್ರತಿಯನ್ನು

1. ನಿರ್ದೇಶಕರು ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಸಂಸ್ಥೆ ಬೆಂಗಳೂರು-85 ರವರ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ತುರ್ತು ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಮಾಹಿತಿಗಾಗಿ
4. ನಿರ್ದೇಶಕರು ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ . ಕಸ್ತೂರಿ ಬಾ ರಸ್ತೆ ಬೆಂಗಳೂರವರ ಮಾಹಿತಿಗಾಗಿ